**ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ, ನಂ.17, "ಜಯನಿವಾಸ", ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು-4.**

ಸಂಖ್ಯೆ:ಲೆಪಶಾ-1/ಇತರೆ/ಮೆಮೋ/89/2013-14 ದಿನಾಂಕ:೦3 -10-2013

**ಸುತ್ತೋಲೆ**

ವಿಷಯ: ಸೌಹಾರ್ದ ಸಹಕಾರಿಗಳು 2013-14ನೇ ಸಾಲಿನ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಳ್ಳುವ ಕುರಿತು.

ಉಲ್ಲೇಖ: 1. ಕರ್ನಾಟಕ ಸೌಹಾರ್ದ ಸಹಕಾರಿಗಳ (ತಿದ್ದುಪಡಿ) ಕಾಯ್ದೆ 2012 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿಗಳ (ತಿದ್ದುಪಡಿ) ನಿಯಮಗಳು 2013.

2. ಈ ನಿರ್ದೇಶನಾಲಯದ ಸುತ್ತೋಲೆ ಸಮ ಸಂಖ್ಯೆ ದಿನಾಂಕ: 03-08-2013.

******

ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖ (1) ರ ಸೌಹಾರ್ದ ಸಹಕಾರಿಗಳ ಕಾಯ್ದೆ ನಿಯಮಗಳನ್ವಯ ಎಲ್ಲಾ ಸೌಹಾರ್ದ ಸಹಕಾರಿಗಳು ಅವುಗಳ ಲೆಕ್ಕಪರಿಶೋಧನೆ ನಿರ್ವಹಿಸಿಕೊಳ್ಳಲು ಅರ್ಹ ಲೆಕ್ಕಪರಿಶೋಧಕರನ್ನು ವಾರ್ಷಿಕ ಮಹಾ ಸಭೆಯಲ್ಲಿ ಆಯ್ಕೆ ಮಾಡಿಕೊಳ್ಳುವ ಸಲುವಾಗಿ, ಸೌಹಾರ್ದ ಸಹಕಾರಿಗಳನ್ನು ಅವುಗಳ ದುಡಿಯುವ ಬಂಡವಾಳ / ವ್ಯಾಪಾರ ವಹಿವಾಟಿಗೆ ಅನುಗುಣವಾಗಿ ವಿಂಗಡಿಸಿ ಆಯಾ ಗುಂಪಿಗೆ ಅನುಗುಣವಾಗಿ ಅರ್ಹ ಲೆಕ್ಕಪರಿಶೋಧಕರ ಪಟ್ಟಿಯನ್ನು ಉಲ್ಲೇಖ (2) ರ ರೀತ್ಯ ಇಲಾಖಾ ವೆಬ್‌ಸೈಟ್ ವಿಳಾಸ http://www.sahakaradarpana.kar.nic.in ರಲ್ಲಿ ಪ್ರಚುರ ಪಡಿಸಲಾಗಿರುತ್ತದೆ.

ಸೌಹಾರ್ದ ಸಹಕಾರಿಗಳು 2013-14ನೇ ಸಾಲಿನ ಲೆಕ್ಕಪರಿಶೋಧನೆಗೆ (ಬಾಕಿ ಸಾಲುಗಳು ಸೇರಿದಂತೆ) ಅವುಗಳ ದುಡಿಯುವ ಬಂಡವಾಳ / ವ್ಯಾಪಾರ ವಹಿವಾಟಿಗೆ ಅನುಗುಣವಾಗಿ ಆಯಾ ಗುಂಪಿನಿಂದ ಅರ್ಹ ಲೆಕ್ಕಪರಿಶೋಧಕರಲ್ಲಿ ಒಬ್ಬರನ್ನು ಉಲ್ಲೇಖ (2) ರ ಸುತ್ತೋಲೆಯಲ್ಲಿ ತಿಳಿಸಿರುವ ರೀತ್ಯ ವಾರ್ಷಿಕ ಮಹಾ ಸಭೆಯಲ್ಲಿ ಆಯ್ಕೆ ಮಾಡಿಕೊಳ್ಳಲು ಈ ಮೂಲಕ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ತಿಳಿಯಪಡಿಸಲಾಗಿದೆ.

ನಿರ್ದೇಶಕರು
ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇಲಾಖೆ

**ಪ್ರತಿಯನ್ನು:**

1. ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ. }ಇಲಾಖಾ ವೆಬ್‌ಸೈಟ್
2. ಅರ್ಹ ಪ್ಯಾನಲ್ ಪಟ್ಟಿಯಲ್ಲಿನ ಎಲ್ಲಾ ಸನ್ನದು ಲೆಕ್ಕಪರಿಶೋಧಕರು/ ಸನ್ನದು ಲೆಕ್ಕಪರಿಶೋಧಕರ ಫರ್ಮ್ ರವರ ಗಮನಕ್ಕೆ. }ಮೂಲಕ.
3. ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರುಗಳಿಗೆ.
4. ಕೇಂದ್ರ ಕಛೇರಿಯ ಎಲ್ಲಾ ಜಂಟಿ ನಿರ್ದೇಶಕರು / ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು / ನಿರ್ದೇಶಕರ ಪತ್ರಾಂಕಿತ ಆಪ್ತ ಸಹಾಯಕರಿಗೆ.

d:\bck 7-12-13\(chitra)\g a gayathri\dd audit\souharda\circular (2).docx